ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	287
ಸದಸ್ಯರ ಹೆಸರು	ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರ ಕ್ಷೇತ್ರ)
ಉತ್ತರಿಸುವ ದಿನಾಂಕ	09-12-2020
ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	"ಕೃಷಿ ಭಾಗ್ಯ ಯೋಜನೆ" ಯಡಿ ಕೃಷಿ ಹೊಂಡ ಪಾಲಿಹೌಸ್ ಮತ್ತು ನೆರಳುಪರದೆ ಮನೆಗಳನ್ನು ನಿರ್ಮಿಸಲು ಒದಗಿಸುತ್ತಿರುವ ಅನುದಾನದ ಮೊತ್ತವೆಷ್ಟು? ಯಾವ ರೈತರುಗಳು ಸದರಿ ಯೋಜನೆಗೆ ಅರ್ಹರಾಗಿರುತ್ತಾರೆ:	ಪ್ರಸಕ್ತ ಸಾಲಿನಲ್ಲಿ ಕೃಷಿ ಭಾಗ್ಯ ಯೋಜನೆಯಡಿ ಅನುಷ್ಠಾನಗೊಂಡ ಕೃಷಿ ಹೊಂಡ ಹಾಗೂ ಅವುಗಳ ಪೂರಕ ಘಟಕಗಳಾದ ಪಾಲೀಥೀನ್ ಹೊದಿಕೆ, ಡೀಸೆಲ್ ಪಂಪ್ ಸೆಟ್, ಲಘು ನೀರಾವರಿ ಘಟಕ, ಕೃಷಿ ಹೊಂಡದ ಸುತ್ತಲೂ ನೆರಳು ಪರದೆ ಘಟಕಗಳ ಬಾಕಿ ಪಾವತಿಗೆ ರೂ.40.00 ಕೋಟಿ ಅನುದಾನ ಒದಗಿಸಲಾಗಿದೆ. ಪಾಲಿಹೌಸ್ ಹಾಗೂ ನೆರಳು ಪರದೆ ಮನೆಗಳನ್ನು ಕೃಷಿ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿಲ್ಲ. ರೈತ ಸಂಪರ್ಕ ಕೇಂದ್ರದಿಂದ ಅರ್ಜಿಗಳನ್ನು ರೈತರಿಗೆ ವಿತರಿಸಲಾಗುತ್ತಿದ್ದು, ಸಂಬಂಧಪಟ್ಟ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ ರೈತರಿಂದ ಅರ್ಜಿ ಸ್ವೀಕೃತಗೊಂಡ ನಂತರ ರೈತರ ಕೇತ್ರಕ್ಕೆ ಭೇಟಿ ನೀಡಿ ಜಂಟಿ ಸಮೀಕ್ಷೆ ಕೈಗೊಂಡು, ಪರಿಶೀಲನೆಯಲ್ಲಿ ಜಲಾನಯನ ಪ್ರದೇಶವನ್ನು ಪರಿಗಣಿಸಿ (ನೀರು ಕೊಯ್ಲು ಸನ್ನಿವೇಶ- catchment area)ಅರ್ಹಗೊಂಡ ರೈತರಿಗೆ ಕಾರ್ಯಾದೇಶ ನೀಡಿ ಇಲಾಖೆಯ ಮಾರ್ಗಸೂಚಿಯನ್ವಯ ಸೌಲಭ್ಯ ನೀಡಲಾಗುತ್ತಿದೆ. ಕೃಷಿ ಭಾಗ್ಯ ಯೋಜನೆಯಡಿ ಅರ್ಜಿ ಸಲ್ಲಿಸಿದ ರೈತರಿಗೆ ಕನಿಷ್ಟ 1 ಎಕರೆ ಜಮೀನು ಹೊಂದಿರುವ ರೈತರು ಯೋಜನೆಗೆ ಅರ್ಹರಾಗಿರುತ್ತಾರೆ.

ಆ)	ಕಳೆದ ಮೂರು ವರ್ಷಗಳಲ್ಲಿ ಬೆಳಗಾವಿ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳ ವ್ಯಾಪ್ತಿಯಲ್ಲಿ "ಕೃಷಿ ಭಾಗ್ಯ ಯೋಜನೆ" ಯಡಿ ಪ್ರಯೋಜನ ಪಡೆದ ರೈತರುಗಳ ಸಂಖ್ಯೆ ಎಷ್ಟು; (ವರ್ಷವಾರು , ತಾಲ್ಲೂಕುವಾರು ವಿವರ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ಬೆಳಗಾವಿ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳ ವ್ಯಾಪ್ತಿಯಲ್ಲಿ "ಕೃಷಿ ಭಾಗ್ಯ ಯೋಜನೆ" ಯಡಿ ಪ್ರಯೋಜನ ಪಡೆದ ರೈತರುಗಳ ಸಂಖ್ಯೆ ವರ್ಷವಾರು, ತಾಲ್ಲೂಕುವಾರು ಪಟ್ಟಿ ಅನುಬಂಧದಲ್ಲಿ ನೀಡಿದೆ.
ಇ)	ಸದರಿ ಯೋಜನೆಗಳ ಮೊತ್ತವನ್ನು ಹೆಚ್ಚಿಸುವ ಯೋಜನೆ ಸರ್ಕಾರದ ಮುಂದಿದೆಯೇ;	2020-21ನೇ ಸಾಲಿಗೆ ರೂ.40.00 ಕೋಟಿ ಅನುದಾನ ಮೀಸಲಿರಿಸಲಾಗಿದೆ. ಸದರಿ ಅನುದಾನವನ್ನು ಕಳೆದ ಸಾಲಿನಲ್ಲಿ ಯೋಜನೆಯ ಮಾರ್ಗಸೂಚಿಯನ್ವಯ ಈಗಾಗಲೇ ಅನುಷ್ಠಾನ ಮಾಡಿರುವ ಘಟಕಗಳಿಗೆ ಮಾತ್ರ ಬಾಕಿ ಸಹಾಯಧನ ಪಾವತಿಸಲು ನಿಗಧಿಯಾಗಿರುತ್ತದೆ.
ಈ)	ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಸದರಿ ಯೋಜನೆಯ ಮೊತ್ತವನ್ನು ಹೆಚ್ಚಿಸಲಾಗುವುದು.	ಉದ್ಭವಿಸುವುದಿಲ್ಲ.

ಸಂಖ್ಯೆ:AGRI-AML/224/2020

(ಬಿ.ಸಿ. ಪಾಟೀಲ್)

ಕೃಷಿ ಸಚಿವರು

ಅನುಬಂಧ

ಬೆಳಗಾವಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೃಷಿ ಭಾಗ್ಯ ಯೋಜನೆಯಡಿ ಪ್ರಯೋಜನ ಪಡೆದ ರೈತರ ಸಂಖ್ಯೆ

ಕ್ರ.ಸಂ.	ತಾಲ್ಲೂಕು	2017-18	2018-19	2019-20
		ಸಂಖ್ಯೆ	ಸಂಖ್ಯೆ	ಸಂಖ್ಯೆ
1	ಅಥಣಿ	1420	1082	162
2	ಬೈಲಹೊಂಗಲ	556	496	18
3	ಚಿಕ್ಕೋಡಿ	958	990	121
4	ಗೋಕಾಕ	351	167	62
5	ಹುಕ್ಕೇರಿ	148	110	39
6	ರಾಯಬಾಗ	395	863	0
7	ರಾಮದುರ್ಗ	608	313	21
8	ಸವದತ್ತಿ	565	1410	0
9	ಬೆಳಗಾವಿ	114	167	8
10	ಖಾನಾಪೂರ	291	286	83

ಬಾಗಲಕೋಟೆ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೃಷಿ ಭಾಗ್ಯ ಯೋಜನೆಯಡಿ ಪ್ರಯೋಜನ ಪಡೆದ ರೈತರ ಸಂಖ್ಯೆ

ಕ್ರ.ಸಂ.	ತಾಲ್ಲೂಕು	2017-18	2018-19	2019-20
		ಸಂಖ್ಯೆ	ಸಂಖ್ಯೆ	ಸಂಖ್ಯೆ
1	ಬಾದಾಮಿ	180	468	115
2	ಬಾಗಲಕೋಟೆ	102	164	240
3	ಹುನಗುಂದ	1041	686	130
4	ಬೀಳಗಿ	524	159	83
5	ಜಮಖಂಡಿ	1224	874	197
6	ಮುಧೋಳ	607	61	118

ವಿಜಯಪುರ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೃಷಿ ಭಾಗ್ಯ ಯೋಜನೆಯಡಿ ಪ್ರಯೋಜನ ಪಡೆದ ರೈತರ ಸಂಖ್ಯೆ

ಕ್ರ.ಸಂ.	ತಾಲ್ಲೂಕು	2017-18	2018-19	2019-20
		ಸಂಖ್ಯೆ	ಸಂಖ್ಯೆ	ಸಂಖ್ಯೆ
1	ವಿಜಯಪುರ	2131	1031	572
2	ಇಂಡಿ	1397	783	475
3	ಸಿಂದಗಿ	1729	513	662
4	ಬ.ಬಾಗೇವಾಡಿ	772	114	53
5	ಮುದ್ದೇಬಿಹಾಳ	1001	159	363